**ಓ.ಎಸ್ 474/2017**

ಪಿ. ಡಬ್ಲ್ಯೂ : 01

<u>**ಸಾಕ್ಷಿಗೆ ದಿನಾಂಕ 11.12.2019 ರಂದು ಪ್ರಮಾಣ ವಚನ ನೀಡಲಾಯಿತು.**</u>

<u>**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ**</u>

ನಾನು ಗೃಹಿಣಿ. ನಾನು ಗೃಹಿಣಿಯಾಗಿದ್ದರಿಂದ ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸಾಕ್ಷಿಯು ನನಗೆ ಜಮೀನು ಇದೆ ಎನ್ನುತ್ತಾರೆ . ಜಮೀನು ಇದ್ದ ಬಗ್ಗೆ ನ್ಯಾ.ಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ . ಜಮೀನು ಇಲ್ಲದಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಲಕ್ಷ ಮೊತ್ತದ ಹಣವನ್ನು ಐದು ನೂರು ಹಾಗೂ ನೂರು ರೂ. ಮುಖಬೆಲೆಯ ಹಣವನ್ನು ನೀಡಿರುತ್ತೇನೆ. 500 ರೂ ಮುಖ ಬೆಲೆಯ ಒಟ್ಟು ಎಷ್ಟು ನೋಟು ನೀಡಿರುತ್ತೇನೆ ಗೊತ್ತಿಲ್ಲ. ಪ್ರತಿವಾದಿಯು 500 ಹಾಗೂ 100 ರೂ ಮುಖ ಬೆಲೆಯ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ನೋಟೀಸನ್ನು ಕೊಟ್ಟಾಗ ಸದರಿ ನೋಟೀಸ್ ನೊಂದಿಗೆ ನಿಪಿ 1ನ್ನು ಲಗತ್ತಿಸಿ ನೋಟೀಸನ್ನು ಕೊಟ್ಟಿಲ್ಲ. ಸದರಿ ದಾಖಲೆಯನ್ನು ಲಗತ್ತಿಸಲು ತೊಂದರೆ ಇತ್ತ ಎಂದರೆ ಸಾಕ್ಷಿಯು ನಾನು ನೋಟೀಸನ್ನು ಕಳುಹಿಸಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿಯು ನನಗೆ ನೀಡಿದ ಪ್ರತ್ಯುತ್ತರದಲ್ಲಿ ನನ್ನ ಗಂಡ ಒಂದು ಪ್ರೊನೋಟ್ ಹಾಗೂ ಚೆಕ್ಕನ್ನು ಕೊಟ್ಟಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿ . ಪ್ರತಿವಾದಿಗೆ ನಾನು ನೋಟೀಸನ್ನು ನೀಡಿದ 2 ವರ್ಷಗಳ ನಂತರ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ . ನಿಪಿ 1 ನ್ನು ಸೃಷ್ಟಿಸಿ ನ್ಯಾ.ಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ

ಬಂದ ಮನಿ ಆರ್ಡರ್ ಮೇಲೆ ಸಹಿಮಾಡಿ ವಾಪಸ್ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿ . ಮನಿ ಆರ್ಡರ್ ನ್ನು ಒಟ್ಟು 6 ಸಲ ಪಡೆದಿದ್ದೀರಿ ಎಂದರೆ ಸಾಕ್ಷಿಯು ನನಗೆ ಎ ಷ್ಟು ಸಲ ಪಡೆದುಕೊಂಡಿದ್ದೇನೆ ಗೊತ್ತಿಲ್ಲ. ಹಣ ಪಡೆದ ಬಗ್ಗೆ ಪತ್ರ ನಮೂದಿಸಿಲ್ಲ ಎಂದರೆ ಸರಿ . ಮನಿ ಆರ್ಡರ್ ನ್ನು ಹೊರತು ಪಡಿಸಿ ಪ್ರತಿವಾದಿಯು ನಗದು ರೂಪದಲ್ಲಿ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ಪ್ರತಿವಾದಿಯಿಂದ ಹೆಚ್ಚು ಹಣ ಪಡೆಯುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಇಂದ ನನಗೆ ಯಾವುದೇ ಹಣ ಬರಬೇಕಾಗಿಲ್ಲ ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ